by requesting staff nurse of the local hospital to visit the instituion daily to check up the health of the inmates.

d) Since the posts of Principal and Teachers have been filled by deputation and other posts are filled through Zilla Panchayath. Hence the Question is not applicable.

e) As the posts have been filled by deputation and alternative arrangements have been made through Zilla Panchayath, this question does not arise.

ನರಸಿಂಹರಾಜ ಕ್ಷೇತ್ರದಲ್ಲಿ ಕುಡಿಯುವ ನೀರಿನ ಕಾಮಗಾರಿ ವಿಳಂಬ

2262 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹ ರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಕ್ಕೆ ಬೆಳಗೊಳದ ನೀರು ಸಂಗ್ರಹಾಗಾರದಿಂದ ಕೆಲವು ವರ್ಷಗಳ ಹಿಂದೆ 8.0 ಎಂ.ಜಿ.ಡಿ. ಕಾಮಗಾರಿ ಪ್ರಾರಂಭವಾಗಿದ್ದು ಈ ಕಾಮಾಗಾರಿ ಪೂರ್ಣಗೊಳ್ಳದೆ ವಿಳಂಬವಾಗಲು ಕಾರಣವೇನು?

ಆ) ಈ ಹಿನ್ನಲೆಯಲ್ಲಿ ನರಸಿಂಹರಾಜ ಕ್ಷೇತ್ರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಂಡಿದ್ದು ಈ ಕಾಮಗಾರಿಯನ್ನು ಯಾವ ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಈ ಯೋಜನೆಯಲ್ಲಿ ಮುಖ್ಯ ಕಾಮಗಾರಿಯಾದ 750 ಎಂ.ಎಂ. ವ್ಯಾಸದದ ಏರು ಕೊಳವೆ ಮಾರ್ಗದ ಕಾಮಗಾರಿಯ ಗುತ್ತಿಗೆದಾರರು ದರ ಪರಿಷ್ಕರಣೆ ಕೋರಿ ಕೆಲಸವನ್ನು ನಿಲ್ಲಿಸಿದ್ದರು. ಈ ದರಗಳ ಪರಿಷ್ಕರಣೆಯು ಈಗ ಇತ್ಯರ್ಥವಾಗಿದ್ದು ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗಿದೆ. ಈ ಯೋಜನೆಯನ್ನು ಡಿಸೆಂಬರ್ 1997ರಲ್ಲಿ ಚಾಲ್ತಿಗೊಳಿಸಲಾಗುವುದು.

ಆ) ಯೋಜನೆಯನ್ನು ಡಿಸೆಂಬರ್ 97ರಲ್ಲಿ ಚಾಲ್ತಿಗೊಳಿಸಿ ನರಸಿಂಹರಾಜ ಕ್ಷೇತ್ರಕ್ಕೆ ನೀರು ಸರಬರಾಜು ಮಾಡಲಾಗುವುದು.

ಶಿಗ್ಗಾಂವ್ ಪಟ್ಟಣದಲ್ಲಿ ಹಾಗೂ ಸವಣೂರು ಪಟ್ಟಣದಲ್ಲಿ ಪೋಸ್ಟ್‌ಮೆಟ್ರಿಕ್ ಹಾಸ್ಟೆಲ್ ಮಂಜೂರಾತಿ

2264 - ಶ್ರೀ ಮಂಜೂನಾಥ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?